<u>ಸಾಕ್ಷಿಯನ್ನು ದಿನಾಂಕ **31-01-2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .</u>

<u>ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಬಿ.ಎಸ್.ವಿ. ವಕೀಲರಿಂದಃ-</u>

ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿದೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಭಾಗವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ .

ದಿನಾಂಕ 21-01-2023 ರಂದು ಆರೋಪಿ ನೀಡಿದ ಚೆಕ್ ಸಂಖ್ಯೆ 502926 ರ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ.-1 ಎಂದು, ದಿನಾಂಕ 24-02-2023 ರಂದು ಕೆನರಾ ಬ್ಯಾಂಕ್, ಯಡೂರು ಶಾಖೆ ನೀಡಿದ ಹಿಂಬರಹವನ್ನು ನಿ.ಪಿ.-2 ಎಂದು, ದಿನಾಂಕ 03-03-2023 ರಂದು ಆರೋಪಿಗೆ ನೀಡಿದ ನೋಟೀಸ್ ಪ್ರತಿಯನ್ನು ನಿ.ಪಿ.-3 ಎಂದು ಕವರಿ ಗ್ರಾಮದ ಜಮೀನು ಸರ್ವೇ ಸಂಖ್ಯೆ 66 ರ ಪಹಣಿ ಪತ್ರಿಕೆಯ ಮೂಲ ಪ್ರತಿಯನ್ನು ನಿ.ಪಿ.-4 ಎಂದು , ಒಂದು ಅಂಚೆ ಚೀಟಿಯನ್ನು ಮತ್ತು ಒಂದು ಅಂಚೆ ಸ್ವೀಕೃತಿಯ ದೃಢೀಕೃತ ಪ್ರತಿಯನ್ನು ನಿ.ಪಿ.-5 ಎಂದು, ಪಿ.ಸಿ.ಆರ್. ಸಂಖ್ಯೆ 35/2023 ರ ದೃಢೀಕೃತ ಪ್ರತಿಯನ್ನು ನಿ.ಪಿ.-6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u>- ಶ್ರೀ ಡಿ.ಎನ್.ಹೆಚ್. ವಕೀಲರಿಂದ.

ಪಾಟೀ ಸವಾಲಿಗೆ ಸಮಯ ಕೋರಿದ್ದು ಪ್ರತಿವಾದಿ ಪ್ರತಿವಾದಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಮುಕ್ತ ನ್ಯಾಯಾಲಯದಲ್ಲಿ ಗಣಿಕೀಕರಿಸಲಾಯ್ತು.)**

**(ಸಾಕ್ಷಿಗೆ ಓದಿ , ತಿಳಿಸಿ ಹೇಳಿದಾಗ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ .)**

(ಸಂತೋಷ್ ಎಂ.ಎಸ್. )
ಹಿರಿಯ ವ್ಯವಹಾರ ನ್ಯಾಯಾಧೀಶರು,
ಹೊಸನಗರ .